ಇರಬೇಕಾಗುತ್ತದೆ. ಆ ರೀತಿ ಇದ್ದರೆ ಈ ಮಿನಿಮಮ್ ವೇಜಸ್ ಆಕ್ಟ್‌ನ್ನು ಎಕ್ಸ್‌ಟೆಂಡ್ ಮಾಡಬಹುದು;

ಶ್ರೀ ಎಂ. ಎಸ್. ಕೃಷ್ಣನ್ :- ಈ ಹ್ಯಾಂಡ್‌ಲೂಮ್, ಸಿಲ್ಕ್, ಕಾಟನ್, ಈ ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರ ಪರಿಸ್ಥಿತಿ ಬಹಳ ಕೆಟ್ಟಿದೆ; ಆದಕಾರಣ ಈ ಜನರ ಬಗ್ಗೆ ವಿಷಯಗಳನ್ನು ಸಂಗ್ರಹ ಮಾಡುವುದಕ್ಕೆ ಒಂದು ಎನ್‌ಕ್ವೈರಿ ಕಮಿಟಿ ರಚನೆ ಮಾಡಲು ಯೋಚನೆ ಮಾಡುತ್ತೀರಾ ? ಈಗಾಗಲೇ ಬೇರೆ ರಾಜ್ಯದವರು ಇದನ್ನು ಮೂಡಿದ್ದಾರೆ ?

ಶ್ರೀ ಎಸ್. ಎಂ. ಯಾಹ್ಯಾ :—ಪರಿಸ್ಥಿತಿ ಚೆನ್ನಾಗಿಲ್ಲವೆಂದು ತಿಳಿದುಕೊಂಡೇ ನಾವು ಮೊದಲನೇ ಹೆಜ್ಜೆಯಾಗಿ ಈ ಮಿನಿಮಮ್ ವೇಜಸ್‌ನ್ನು ನಿಗದಿ ಮಾಡುತ್ತಿದ್ದೇವೆ. ಅದಕ್ಕಾಗಿ ಒಂದು ಕಮಿಟಿ ಮಾಡುತ್ತೇವೆ. ಆದರಲ್ಲಿ ಈ ಎಲ್ಲ ಅಂಶಗಳನ್ನು ವಿಚಾರ ಮಾಡುವ ಸದಸ್ಯರು ಇರಬಹುದು, ಅವರು ಇದನ್ನೆಲ್ಲಾ ವಿಚಾರ ಮಾಡಿದ ಮೇಲೆ, ಅದು ಸ್ಟೇಟ್ ಮಿನಿಮಮ್ ವೇಜಸ್ ಬೋರ್ಡಿನ ಮುಂದೆ ಹೋಗುತ್ತದೆ. ಅಲ್ಲಿ ಅವರು ಅದನ್ನು ತನಿಖೆ ಮಾಡುತ್ತಾರೆ.

* *onstruction of L. F. Dispensary Building at Tavarekere --*

346. SRI T. TAREGOWDA (Kallambella)—

Will the Minister for Health be pleased to state :—

(a) whether adequate funds have been porvided in the budget for the year 1975-76 for the construction of a new L.F. Dispensary Building at Tavarekere, Sira Taluk as assured by the Minister :

(b) if so, whether necessary orders have been issued to construct the building ;

(c) whether it has come to the notice of the Government that the original building which was donated is very old and in a dilapidated condition ;

(d) whether Government is aware that a free site has been given by the V. P. to the Health Department by Registered Gift Deed for the building through Medical Officer, Sira PHE. last year ;

(Sri T. Taregowda)

(e) if so, whether the Executive Engineer, P. W. D., Madhugiri has been asked to take up the work by inviting tenders for the L. F. Dispensary Building ?

SRI H. SIDDAVEERAPPA (Minister for Health)—

(a) No.
(b) No.
(c) Yes.
(d) Yes.
(e) No.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು :— ಇಲ್ಲಿ ಮೊದಲನೇ ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಎಂದು ಹೇಳಿದ್ದೀರಿ. ಆದರೆ 1972-73ರಲ್ಲಿ ಭಾರಿ ಮಳೆ ಬಂದಾಗ ಆ ಕಟ್ಟಡ ಹಾಳಾದ ಮೇಲೆ ಆ ಆಸ್ಪತ್ರೆ ಈಗ ಛತ್ರದಲ್ಲಿ ನಡೆಯುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

+ಶ್ರೀ ಎಚ್. ಸಿದ್ದವೀರಪ್ಪ :— ನನ್ನ ಗಮನಕ್ಕೆ ಬಂದಿದೆ. ಲೋಕಲ್ ಬಾಡೀಸ್ ಅವರಿಗೆ ತಮ್ಮ ಭಾಗದ ವಂತಿಕೆಯನ್ನು ಕೂಡಿ ಎಂದು ಕೇಳಿದಾಗ, ಅವರು ಮಳೆ ಬಂದು ಕಟ್ಟಡ ಹಾಳಾಯಿತು, ಆ ಕಾರಣದಿಂದ ತಮ್ಮ ಭಾಗದ ಹಣ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಮತ್ತು ಹಣ ಕೊಡಲು ತಮಗೆ ತೊಂದರೆ ಇದೆ ಎಂದು ಹೇಳಿದ್ದಾರೆ. ಈಗ ಸರ್ಕಾರವೇ ಅದನ್ನು ಮೀಟ್ ಮಾಡಬೇಕೆಂದುಕೊಂಡು ಅ ಬಗ್ಗೆ ಪ್ಲಾನ್ ಅಂಡ್ ಎಸ್ಟಿಮೇಟನ್ನು 1.52 ಲಕ್ಷ ರೂಪಾಯಿಗಳಿಗೆ ತಯಾರಿಸಲಾಗಿದೆ. ಆ ಕೆಲಸವನ್ನು ಸರ್ಕಾರದವರು ಈ ವರ್ಷವೇ ತೆಗೆದುಕೊಂಡು ಮಾಡಿಸುತ್ತಾರೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು. ಈ ವರ್ಷವೇ ಎಂದರೆ ಯಾವಾಗ ಮಾಡಿಸುತ್ತೀರಿ ? ತಿಂಗಳು ಯಾವಾಗಲೂ ಹಣದ ಮುಗ್ಗಟ್ಟಿದೆ ಎಂದು ಹೇಳುತ್ತೀರಿ; ಆದಕಾರಣ ಈ ಕಟ್ಟಡವನ್ನು ಯಾವಾಗ ಕಟ್ಟಿಸುತ್ತೀರಾ ಎಂಬುದನ್ನು ಹೇಳಬೇಕು ?

ಶ್ರೀ ಹೆಚ್. ಸಿದ್ದವೀರಪ್ಪ :— ನಮ್ಮ ಬಡ್ಜೆಟ್ ಇನಿದೆ, ಅದರಲ್ಲಿ ಈ ವರ್ಷವೇ ಮಾಡುತ್ತೇವೆ.